


**ಎಡದಿಂದ ಬಲಕ್ಕೆ**

1. ಪ್ರಾರಂಭದಿಂದಲೇ ಆತನಿಗೆ ಲಭಿಸಿದ್ದು ಭಾರೀ ಅಪಜಯ 4
3. ಬದರಿಯಿಂದ ಪ್ರಸಾದ ತರಲು ಈ ಅಗಲ ಬಾಯಿಯ ಪಾತ್ರೆ 3
4. ಇಡೀ ರಾಜ್ಯಕ್ಕೇ ಮಾದರಿಯಾಗಿದ್ದಾನೆ ಇಲ್ಲೊಬ್ಬ ಅಗಸ 3
6. ಭೋಜನಪ್ರಿಯತೆಯನ್ನು ಕೈಬಿಟ್ಟ ನಂತರ ಜನರಿಗೆ ಇಷ್ಟದವನಾದ 4
7. ಬಂದ ಕಾಣಿಕೆಗಳ ಲೆಕ್ಕ ಬರೆದಿಡಲು ಬೇಕೇ ಬೇಕು ಒಂದು ಪೆನ್ನು 4
9. ಬ್ಯಾಗನ್ನು ಬಗಲಿಗೇರಿಸಿ ನಡೆದದ್ದು ಬಹಳ ಬೇಗ ಬೇಗ 4
12. ದಡ್ಡನಿಂದ ಕಸಿದು ತಂದದ್ದು ತಾನೇ ಈ ಚಿಕ್ಕ ದೊಡ್ಡ ಹಣ? 4
14. ತಳ್ಳಿದ್ದು ಸಾಕಾಯಿತೆಂದು ಹೀಗೆ ಪಾದ ಘಾತವೇ? 3
15. ಚಂದ್ರನನ್ನು ವೀಕ್ಷಿಸುವಾಗ ಬೆಚ್ಚಗಿರಲು ಈ ಹೊದಿಕೆ 3
16. ನಾಡಿಗೇ ಪ್ರಸಿದ್ಧನಾದ ವಿದೂಷಕನೆಂದರೆ ಗೊತ್ತೇ? 4

**ಮೇಲಿನಿಂದ ಕೆಳಕ್ಕೆ**

1. ಪ್ರಾಣಾಯಾಮ ಕಲಿಸಿದವನೊಡನೆಯೇ ಆಕೆಯ ವಿವಾಹ 4
2. ಅವರ ಮನೆಯಲ್ಲೇ ಸಿದ್ಧವಾದದ್ದು ಈ ಮದುಮಗನ ಹಾರ 4
3. ಮುಂದಿನ ಕೆಲಸ ದುಷ್ಟರನ್ನು ತುಳಿದುಹಾಕುವುದೇ ತಾನೇ? 3
5. ಕರೀ ಮಣಿಯ ಸರವನ್ನು ತೊಡಿಸಿರುವ ಹೆಣ್ಣಾನೆಯನ್ನು ನೋಡಿದಿರಾ? 3
6. ಜ್ಯೋತಿಷಿಯ ಕೆಲಸದಲ್ಲಿ ಗೆಲುವು ಪಡೆದವ ಈತ 4
8. ಕರೆಕಳಿಸುವ ಬದಲು ಎಲ್ಲರಿಗೂ ಕೋಪ ಬರುವಂತೆ ಮಾಡು 4
10. ತೊಗರಿ ಕಾಳನ್ನು ಕಂಡುಹಿಡಿಯಲು ಬೇಕಾದ ಚಹರೆ ಗೊತ್ತೇ? 3
11. ಗೋಳಾಡುತ್ತಿದ್ದವನನ್ನು ಸುಮ್ಮನಾಗಿಸಿದ್ದು ಜೊತೆಗಾರನ ಸ್ನೇಹ 4
12. ದೇವರ ಮುಂದೆ ಆತನದು ಇದೇನು ಕೆಟ್ಟ ನಡವಳಿಕೆ? 4
13. ಕಾರಂತರ ಭಾಷಣವನ್ನು ಕೇಳಲು ಭಾರೀ ಅವಸರ 3

### 25–12–2025 ಉತ್ತರಗಳು

**ಎಡದಿಂದ ಬಲಕ್ಕೆ**

1. ಅನ್ಯಲೋಕ 3. ಆರಾಮ 4. ರಮಣ 6. ರಕ್ಷಾಪುಟ 7. ಅರುಂಧತಿ 8. ಅಹರ್ನಿಶಿ 10. ಸದಾಶಯ 12. ತಿರುಮಲೆ 14. ಅಂಧಕಾರ 16. ನಸೀಬು 17. ಹರಡು 18. ಜಲಸಸ್ಯ

**ಮೇಲಿನಿಂದ ಕೆಳಕ್ಕೆ**

1. ಅಮರ 2. ಕರಟ 3. ಆರಾಧಕ 5. ಣರಹ (=ಹರಣ ಹಿಂದುಮುಂದು) 7. ಅನಾಯಾಸ 9. ಶಿಲಾಬಾಲೆ 11. ಶಮನ 13. ಕರುನಾಡು 14. ಅಂಬುಜ 15. ರಹಸ್ಯ

ಪ್ರಶ್ನಾಂಕಣ

# ವೃಷ್ಟಿವನ: ಅದ್ವಿತೀಯ, ದ್ವಿತೀಯ ಯಾವುವು?

## ವೃಷ್ಟಿವನ ಅಥವಾ ಮಳೆಕಾಡು

ಅದು ಧರೆಯ ಅತ್ಯುತ್ಕೃಷ್ಟ ಅರಣ್ಯ ವಿಧ (ಚಿತ್ರಗಳಲ್ಲಿ ನೋಡಿ). ಈ ಬಗೆಯ ಅರಣ್ಯದಲ್ಲೇ ಗರಿಷ್ಠ ಸಸ್ಯ ಸಂಪತ್ತು ಮತ್ತು ಪ್ರಾಣಿ ವಿಧಗಳ ನಿಬಿಡ ಅಸ್ತಿತ್ವ ಕೂಡ. ವೃಷ್ಟಿವನದಲ್ಲಿ ಹಲವು ವಿಧಗಳಿವೆ, ಅವುಗಳೆಲ್ಲಲ್ಲ ಸಮಭಾಜಕದ ಆಸುಪಾಸಿನ ವೃಷ್ಟಿವನಗಳದೇ ಗರಿಷ್ಠ ಶ್ರೇಷ್ಠತೆ. ವೃಷ್ಟಿವನಗಳು ಭೂ ಮೇಲ್ಮೈನ ಶೇಕಡ ಆರರಷ್ಟು ವಿಸ್ತಾರವನ್ನಷ್ಟೇ ಆವರಿಸಿವೆ; ಆದರೂ ಭೂಮಿಯ ಜೀವಜಾಲದ ಶೇಕಡ 50ರಷ್ಟು ಭಾಗ ಈ ಅಡವಿಗಳಲ್ಲೇ ನೆಲೆಸಿವೆ. ಅತ್ಯಂತ ವೈಶಾಲ್ಯದ ಮೊದಲೆರಡು ಸ್ಥಾನಗಳಲ್ಲಿರುವ ವೃಷ್ಟಿವನಗಳ ಸಂಕ್ಷಿಪ್ತ ಪರಿಚಯ–

## ಅಮೆಜಾನ್ ವೃಷ್ಟಿವನ

ದಕ್ಷಿಣ ಅಮೆರಿಕ ಖಂಡದಲ್ಲಿ ಒಟ್ಟು ಒಂಬತ್ತು ದೇಶಗಳಿಗೆ ವ್ಯಾಪಿಸಿರುವ (ಬ್ರೆಜಿಲ್, ಪೆರು, ಕೊಲಂಬಿಯಾ, ಈಕ್ವೆಡಾರ್, ಬೊಲಿವಿಯಾ, ವೆನಿಜುವೆಲಾ, ಗಯಾನಾ, ಫ್ರೆಂಚ್ ಗಯಾನಾ ಮತ್ತು ಸುರಿನೇಂ) ಈ ವೃಷ್ಟಿವನ ಸರ್ವ ಲಕ್ಷಣಗಳಲ್ಲೂ ಇನ್ನೆಲ್ಲಿಯ ವೃಷ್ಟಿವನಕ್ಕೂ ಹೋಲಿಸಲಾಗದ ಅದ್ವಿತೀಯ ಸ್ಥಾನದಲ್ಲಿದೆ. 1100 ಉಪನದಿಗಳಿಂದ ಕೂಡಿರುವ ಅದ್ವಿತೀಯ ನದಿ ಅಮೆಜಾನ್‌ನ ಕೃಪೆಯಲ್ಲಿ ಅರಳಿರುವ ಈ ವೃಷ್ಟಿವನ ಆರು ದಶಲಕ್ಷ ಚದರ ಕಿಲೋಮೀಟರ್ ವೈಶಾಲ್ಯಕ್ಕೆ ವ್ಯಾಪಿಸಿದೆ. ಈ ವೃಷ್ಟಿವನದಲ್ಲಿ 40,000 ಪ್ರಭೇದಗಳ ಗಿಡ ಮರಗಳಿವೆ 16,000 ವೃಕ್ಷ ಪ್ರಭೇದಗಳಿವೆ; ಒಟ್ಟು 40,000 ಕೋಟಿ ವೃಕ್ಷಗಳಿವೆ. ಇಲ್ಲಿರುವ ಹಕ್ಕಿ ಪ್ರಭೇದಗಳು 2500, ಮತ್ಸ್ಯ ಪ್ರಭೇದಗಳು 3000; ಸರೀಸೃಪ ಪ್ರಭೇದಗಳು 400; ಉಭಯವಾಸಿ ಪ್ರಭೇದಗಳು 400; ಸ್ತನಿ ಪ್ರಭೇದಗಳು 430; ಕೀಟ ಪ್ರಭೇದಗಳು 25 ಲಕ್ಷ! ಜೊತೆಗೆ ಮುನ್ನೂರಕ್ಕೂ ಅಧಿಕ ಪಂಗಡಗಳಿಗೆ ಸೇರಿದ ಎಂಟೂವರೆ ಲಕ್ಷ ಕಾಡು ಮನುಷ್ಯರೂ ಈ ಅಡವಿಯಲ್ಲಿ ನೆಲೆಸಿದ್ದಾರೆ! ಒಟ್ಟಾರೆ ಇಡೀ ಜಗದ ಜೀವಜಾಲದ ಶೇಕಡ ಹತ್ತರಷ್ಟು ಪ್ರಭೇದಗಳು ಇಲ್ಲೇ ನೆಲೆಗೊಂಡಿವೆ!

## ಕಾಂಗೋ ವೃಷ್ಟಿವನ




ಆಫ್ರಿಕಾ ಖಂಡದ ಒಂದು ಪ್ರಮುಖ ನದಿಗಳಲ್ಲೊಂದಾದ ಕಾಂಗೋ ನದಿಯ ಆಶ್ರಯದಲ್ಲಿ ಬೆಳೆದು ನಿಂತಿರುವ ಈ ವೃಷ್ಟಿವನ ದ್ವಿತೀಯ ಸ್ಥಾನದಲ್ಲಿದೆ. ಒಟ್ಟು ಎರಡು ದಶಲಕ್ಷ ಚದರ ಕಿಲೋಮೀಟರ್ ವೈಶಾಲ್ಯ ಇರುವ ಈ ವೃಷ್ಟಿವನ ಪಶ್ಚಿಮ ಮತ್ತು ಮಧ್ಯ ಆಫ್ರಿಕಾದ ಆರು ರಾಷ್ಟ್ರಗಳಲ್ಲಿ ಹರಡಿದೆ. ಇಲ್ಲಿ 10,000 ಸಸ್ಯ ಪ್ರಭೇದಗಳಿವೆ; 1000 ವೃಕ್ಷ ಪ್ರಭೇದಗಳಿವೆ; ಒಟ್ಟು ಸುಮಾರು ಮುನ್ನೂರು ಕೋಟಿ ವೃಕ್ಷಗಳಿವೆ. 1000 ಖಗ ಪ್ರಭೇದಗಳು, 700 ಮತ್ಸ್ಯ ಪ್ರಭೇದಗಳು, 400 ಸ್ತನಿ ಪ್ರಭೇದಗಳು ಮತ್ತು ನೂರಾರು ಉಭಯವಾಸಿ ಮತ್ತು ಉರಗ ಪ್ರಭೇದಗಳಿವೆ. ಈ ಅಡವಿಯಲ್ಲಿ 150 ಪಂಗಡಗಳಿಗೆ ಸೇರಿದ ಸಮೀಪ ಒಂಬತ್ತು ಲಕ್ಷ ಕಾಡು ಮನುಷ್ಯರು ನೆಲೆಸಿದ್ದಾರೆ.

■ ಎನ್. ವಾಸುದೇವ್